ಸಂಖ್ಯೆ: ಗ್ರಾಅಪ 167 ಉಖಾಯೋ 2011.

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ: 09.02.2012.

**-: ಸು ತ್ತೋ ಲೆ :-**

**ವಿಷಯ:-** **ಮಹಾತ್ಮ ಗಾಂಧೀ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಕೂಲಿಯ ಮೊತ್ತವನ್ನು ಕುಟುಂಬದ ಮುಖ್ಯಸ್ಥರ ಖಾತೆಗೆ ಮಾತ್ರ ಜಮಾ ಮಾಡುವುದಾಗಿ ಬ್ಯಾಂಕ್‌ಗಳು ತಕರಾರು ಮಾಡುತ್ತಿರುವ ಕುರಿತು.**

ಉಲ್ಲೇಖ:- ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ರಾಯಚೂರು ಜಿಲ್ಲಾ ಪಂಚಾಯತಿ, ಇವರ ಪತ್ರ ಸಂಖ್ಯೆ: ಜಿಪರಾ/ರಾಗ್ರಾಉಖಾಯೋ/ಕೂಲಿ.ಪ/ಬ್ಯಾ.ಖಾತೆ/2011-12/4934, ದಿನಾಂಕ: 31.01.2012.

-:::::-

ರಾಜ್ಯದಲ್ಲಿ ಮಹಾತ್ಮ ಗಾಂಧೀ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಜಾರಿಗೆ ಬಂದ ತಕ್ಷಣ ಭಾರತೀಯ ರಿಸರ್ವ್ ಬ್ಯಾಂಕ್‌ನ " Financial Inclusion " ಮಾರ್ಗಸೂಚಿಯ ಪ್ರಕಾರ ಒಂದು ಕುಟುಂಬಕ್ಕೆ ಒಂದು ಬ್ಯಾಂಕ್ ಖಾತೆ ಎಂಬ ಪ್ರತಿಪಾದನೆಯಂತೆ ಯೋಜನೆಯನ್ನು ಪ್ರಾರಂಭಿಸಲಾಗಿರುತ್ತದೆ. ಪ್ರಸ್ತುತ ಅದೇ ರೀತಿ ಅನುಷ್ಠಾನ ಮಾಡಿಕೊಂಡು ಬರಲಾಗುತ್ತಿದೆ. ಯಾವುದಾದರು ಕುಟುಂಬಗಳಲ್ಲಿ ಒಂದುವೇಳೆ ಕುಟುಂಬದ ಸದಸ್ಯರು ತಮಗೆ ಪ್ರತ್ಯೇಕವಾದ ಬ್ಯಾಂಕ್ ಖಾತೆ ಬೇಕೆಂದು ಅರ್ಜಿ ಸಲ್ಲಿಸಿದರೆ ಅದೇ ರೀತಿ ಅವರು ಬ್ಯಾಂಕ್ ಖಾತೆಯನ್ನು ತೆಗೆಯಲು ಹಕ್ಕುಳ್ಳವರಾಗಿರುತ್ತಾರೆ.

ಏತನ್ಮಧ್ಯೆ ಕೇಂದ್ರ ಸರ್ಕಾರವು ಈ ಯೋಜನೆಯಡಿಯಲ್ಲಿ ಅನುಷ್ಠಾನ ಮಾರ್ಗಸೂಚಿ (Operational Guidelines) ಯನ್ನು 2008ನೇ ಸಾಲಿನಲ್ಲಿ ಹೊರತಂದಿರುತ್ತದೆ. ಸದರಿ ಅನುಷ್ಠಾನ ಮಾರ್ಗಸೂಚಿಯ ಪ್ರಕಾರ ಕೇವಲ ಕುಟುಂಬದ ಮುಖ್ಯಸ್ಥನ ಹೆಸರಿನಲ್ಲಿ ಖಾತೆ ಹೊಂದಿದ್ದು ಇತರೆ ಸದಸ್ಯರು ಅದೇ ಖಾತೆ ಉಪಯೋಗಿಸುವುದನ್ನು ನಿಷೇಧಪಡಿಸಿರುತ್ತದೆ. ಸದರಿ ಮಾರ್ಗಸೂಚಿಯ ಪ್ರಕಾರ ಪ್ರತಿಯೊಬ್ಬ ಕಾರ್ಮಿಕನ ಹೆಸರಿನಲ್ಲೂ ಕೂಡ ಪ್ರತ್ಯೇಕವಾದಂತ ಬ್ಯಾಂಕ್ ಖಾತೆಯನ್ನು ಹೊಂದಬೇಕಾಗಿರುತ್ತದೆ. ಒಂದುವೇಳೆ ಪ್ರತ್ಯೇಕವಾದಂತ ಬ್ಯಾಂಕ್ ಖಾತೆಯನ್ನು ಹೊಂದಲು ಸಾಧ್ಯವಿಲ್ಲದಿದ್ದಲ್ಲಿ ಆ ಕುಟುಂಬದ ಎಲ್ಲಾ ಸದಸ್ಯರೂ ಕೂಡ ಸದರಿ ಬ್ಯಾಂಕ್ ಖಾತೆಗೆ ಜಂಟಿ ಖಾತೆದಾರರಾಗಿರಬೇಕಿರುತ್ತದೆ. ಮತ್ತು ಅನುದಾನ ಸೆಳೆಯುವಾಗಲು ಕೂಡ ಎಲ್ಲಾ ಖಾತೆದಾರರ ಸಹಿಯನ್ನು ಕಡ್ಡಾಯಪಡಿಸಬೇಕಾಗಿರುತ್ತದೆ. ಆದುದರಿಂದ ನಿಮ್ಮ ಜಿಲ್ಲೆಯಲ್ಲಿ ಇರುವಂತಹ ಎಲ್ಲಾ Job Card Holder ಗೆ ಸಂಬಂಧಪಟ್ಟಂತೆ ಅನುಷ್ಠಾನ ಮಾರ್ಗಸೂಚಿಯ ಕಂಡಿಕೆ ಸಂಖ್ಯೆ: 7.2ರ ಪ್ರಕಾರ ಕೂಡಲೇ ಬ್ಯಾಂಕ್ ಖಾತೆಯನ್ನು ಪರಿವರ್ತಿಸಲು ಕ್ರಮ ಕೈಗೊಳ್ಳಲು ತಿಳಿಸಿದೆ. ಆದರೆ ಈ ಪ್ರಕ್ರಿಯೆಯನ್ನು ಯೋಜನೆಯ ಅನುಷ್ಠಾನಕ್ಕೆ ಯಾವುದೇ ರೀತಿಯಲ್ಲಿ ಧಕ್ಕೆಯಾಗದಂತೆ ನೋಡಿಕೊಳ್ಳಲು ಸೂಚಿಸಿದೆ.

13.2.12

(ಡಾ: ಅಮಿತಾ ಪ್ರಸಾದ್)
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

ಗೆ,

ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತಿಗಳ
ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ.

O/C

Issued
Date....16/2/12
Signature